ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು):

ಅ) 3864

ಆ) ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ರಾಜ್ಯ ಸರ್ಕಾರದ ಸೇವೆಯಲ್ಲಿ ಶೇಕಡ 10 ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗಾಗಿ ಕಾಯ್ದಿರಿಸಲಾಗಿದೆ. ಅದೇ ರೀತಿ ಕೇಂದ್ರ ಸರ್ಕಾರ ಸೇವೆಯಲ್ಲಿಯೂ ಸಿ ಮತ್ತು ಡಿ ವರ್ಗಗಳಲ್ಲಿ ತಲಾ ಶೇಕಡ 10 ಮತ್ತು 20 ರಷ್ಟು ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಈ ರೀತಿ ಕಾಯ್ದಿರಿಸಿದ ಹುದ್ದೆಗಳನ್ನು ನಿಯತಕಾಲಿಕವಾಗಿ ನೇಮಕ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಸರ್ಕಾರಗಳು ಕಾಲಕಾಲಕ್ಕೆ ನೇಮಕಾತಿ ಮಾಡಲಾಗುತ್ತದೆ.

1995ನೇ ಜನವರಿ ಅಂತ್ಯದವರೆಗೆ 1393 ಮಾಜಿ ಸೈನಿಕರಿಗೆ ಕೇಂದ್ರ ಸರ್ಕಾರ: ರಾಜ್ಯ ಸರ್ಕಾರ ಮತ್ತು ಅವುಗಳ ಸ್ವಾಮ್ಯದಲ್ಲಿ ಬರುವ ಉದ್ದಿಮೆಗಳಲ್ಲಿ ಉದ್ಯೋಗ ಒದಗಿಸಲಾಗಿದೆ.

ದಿನಗೂಲಿ ನೌಕರರ ಬಗ್ಗೆ

72 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ 10 ವರ್ಷಗಳಿಂದ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು ಖಾಯಂ ಆಗದೆ ಇರುವ ನೌಕರರ ಸಂಖ್ಯೆ ಎಷ್ಟು?

ಆ) ಅವರನ್ನು ಖಾಯಂ ಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಈ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಅದನ್ನು ಸರ್ಕಾರದ ವಿವಿಧ ಇಲಾಖೆಗಳಿಂದ ಪಡೆದು ಸಂಗ್ರಹಿಸಲಾಗಿದೆ.

ಆ) ಸರ್ವೋನ್ನತನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 8307-11:83ರಲ್ಲಿ ದಿನಾಂಕ 23-2-90ರಂದು ನೀಡಿದ ಅಂತಿಮ ಆದೇಶದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರಂದು ಮತ್ತು ಅದಕ್ಕಿಂತ ಹಿಂದೆ ನೇಮಕಗೊಂಡ ಸಾಂದರ್ಭಿಕ:ದಿನಗೂಲಿ ನೌಕರರನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಬೇಕೆಂದು ಆದೇಶಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಎಸ್ಎಲ್ಸಿ 90, ದಿನಾಂಕ 6-8-90ನ್ನು ಹೊರಡಿಸಲಾಗಿದೆ. ಸದರಿ ಆದೇಶದ ಪ್ರಕಾರ ದಿನಾಂಕ 31-12-89ಕ್ಕೆ 10 ವರ್ಷ ಸೇವೆ ಪೂರೈಸಿದ ದಿನಗೂಲಿ ನೌಕರರನ್ನು ದಿನಾಂಕ 1-1-90ರಿಂದ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವಂತೆ ಹಾಗೂ ಇನ್ನುಳಿದ ಅರ್ಹ ನೌಕರರನ್ನು ಮಾಸಿಕ ವೇತನ ಸಿಬ್ಬಂದಿಗೆ ಪರಿವರ್ತಿಸಿ ಅವರುಗಳು ಯಾವಾಗ 10ವರ್ಷಗಳ ಸೇವೆಯನ್ನು ಪೂರ್ತಿಗೊಳಿಸುತ್ತಾರೆಯೋ ಆ ದಿನಾಂಕದಿಂದ ಹಂತ ಹಂತವಾಗಿ ಸಕ್ರಮಗೊಳಿಸಬೇಕು. ಸರ್ಕಾರದಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ದಿನಾಂಕ 31-12-90 ರಿಂದ 31-12-93ರವರೆಗೆ 39,123 ದಿನಗೂಲಿ ನೌಕರರನ್ನು ಸಕ್ರಮಗೊಳಿಸಲಾಗಿದೆ. ಈ ಸಕ್ರಮಗೊಳಿಸುವ ಕ್ರಮವನ್ನು ವಿಮರ್ಶಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ.

ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ :8192:90ರ ದಿನಾಂಕ 11-4-90ರ ಮಧ್ಯಂತರ ಆದೇಶದಲ್ಲಿ 240 ದಿನಗಳ ಸತತ ಸೇವೆ ಸಲ್ಲಿಸಿರುವ

ಸಾಂದರ್ಭಿಕ ದಿನಗೂಲಿ ನೌಕರರನ್ನು ತೆಗೆದುಹಾಕುವಂತೆ ಆದೇಶಿಸಿದೆ. ಹಿನ್ನೆಲೆಯಲ್ಲಿ ದಿನಾಂಕ 1-7-84ರ ನಂತರ ನೇಮಕಗೊಂಡ ಸಾಂದರ್ಭಿಕದಿನಗೂಲಿ ನೌಕರರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆಯಲ್ಲಿ ಮುಂದುವರಿಯುತ್ತಿದ್ದಾರೆ. ಸರ್ಕಾರದಲ್ಲಿರುವ ಮಾಹಿತಿಯ ಪ್ರಕಾರ ಸುಮಾರು 15,000 ದಿನಗೂಲಿ ನೌಕರರನ್ನು ದಿನಾಂಕ 1-7-84ರ ನಂತರ ನೇಮಕಾತಿ ಮಾಡಲಾಗಿದೆ. ಈ ನೌಕರರನ್ನು ಸಕ್ರಮಗೊಳಿಸುವ ಬಗ್ಗೆ ಮೇಲ್ಕಂಡ ರಿಟ್ ಅರ್ಜಿಯ ಅಂತಿಮ ಆದೇಶದ ಹಿನ್ನೆಲೆಯಲ್ಲಿ ನಿರ್ಣಯಿಸಬೇಕಾಗುತ್ತದೆ.

ಬಚಾವತ್ ಆಯೋಗದಿಂದ ನಿಗದಿಪಡಿಸಿದ ನೀರಿನ ಪ್ರಮಾಣ

103 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬಚಾವತ್ ಆಯೋಗದ ಪ್ರಕಾರ ನಮ್ಮ ರಾಜ್ಯಕ್ಕೆ ಎಷ್ಟು ಟಿ.ಎಂ.ಸಿ. ನೀರನ್ನು ನಿಗಧಿಪಡಿಸಲಾಗಿದೆ?*

ಆ) *ನಿಗಧಿಪಡಿಸಿದ ಈ ನೀರಿನ ಪ್ರಮಾಣವಲ್ಲಿ ಯಾವಾವ ಭಾರಿ, ಮಧ್ಯಮ, ನೀರಾವರಿ ಯೋಜನೆಗಳಿವೆ?*

ಇ) *ಈ ನೀರನ್ನು ಇಲ್ಲಿಯವರೆಗೆ ಬಳಸಿಕೊಂಡ: ಹಾಗೂ ಬಳಸಿಕೊಳ್ಳದ ನೀರಾವರಿ ಯೋಜನೆಗಳಾವುವು?*

ಈ) ಈ ಎಲ್ಲ ಟಿ.ಎಂ.ಸಿ. ನೀರನ್ನು 2000 ಇಸವಿಯೊಳಗಾಗಿ ಬಳಸಿಕೊಳ್ಳಲಾಗುವುದೇ?

ಈ ಎಲ್ಲ ಟಿ.ಎಂ.ಸಿ. ನೀರನ್ನು 2000 ಇಸವಿಯೊಳಗಾಗಿ ಬಳಸಿಕೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳಿಗಾಗಿ 734 ಟಿ.ಎಂ.ಸಿ.

ಆ)ಇ) ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ಬಗ್ಗೆ ಸರ್ವ ಪ್ರಯತ್ನಗಳನ್ನು ಮಾಡಲಾಗುವುದು.

ಅನುಬಂಧ

ವಿಧಾನಸಭಾ ಸದಸ್ಯರಾದ ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ : 103 :109

ಕ್ರ.ಸಂ.	ಯೋಜನೆಯ ಹೆಸರು	ನಿಗದಿಪಡಿಸಿರುವ ನೀರಿನ ಪ್ರಮಾಣ (ಟಿ.ಎಂ.ಸಿ.ಗಳಲ್ಲಿ)	1994ರ ಜೂನ್‌ವರೆಗೆ ಉಪಯೋಗಿಸಿ ಕೊಳ್ಳಲಾಗುತ್ತಿರುವ ನೀರಿನ ಪ್ರಮಾಣ (ಟಿ.ಎಂ.ಸಿ.ಗಳಲ್ಲಿ)	ಉಪಯೋಗಿಸಿ ಕೊಳ್ಳಬೇಕಾಗಿರುವ ನೀರಿನ ಪ್ರಮಾಣ (ಟಿ.ಎಂ.ಸಿ.ಗಳಲ್ಲಿ)
1	2	3	4	5
1.	ಘಟಪ್ರಭಾ-1 ಮತ್ತು 2	32.45	32.45	-
2.	ತುಂಗಾ ಅಣೆಕಟ್ಟು	11.50	11.50	-